# ರಾಮನಗರ ಜಿಲ್ಲಾ ಪೊಲೀಸ್

## ಮಾಗಡಿ ಉಪವಿಭಾಗ, ಮಾಗಡಿ ವೃತ್ತ

### ಕುದೂರು ಪೊಲೀಸ್ ಠಾಣೆ

## -: ಪತ್ರಿಕಾ ಪ್ರಕಟಣೆ :-

### " ನಕಲಿ LED TV ಗಳನ್ನು ಹೆಸರಾಂತ ಸೋನಿ ಕಂಪನಿಯ TV ಗಳೆಂದು ನಂಬಿಸಿ ಮಾರಾಟ ಮಾಡಿ ಮೋಸ ಮಾಡುತ್ತಿದ್ದ ಅಂತರರಾಜ್ಯ ಆರೋಪಿಗಳ ಬಂಧನ "

*****

ಪಿರ್ಯಾದುದಾರರಾದ ಶ್ರೀ ಕೃಷ್ಣಮೂರ್ತಿ ಎಂಬುವವರು ದಿನಾಂಕ 17.11.2020 ರಂದು ಸಂಜೆ 4.30 ಗಂಟೆ ವೇಳೆ ಕುದೂರು ಬೈಪಾಸ್‌ನಲ್ಲಿ 1) ಶಹರ್‌ಯಾರ್ ಖಾನ್ ಬಿನ್ ಅಫ್ರೋಜ್ ಖಾನ್, 2) ಶಾರುಖ್ ಖಾನ್ ಬಿನ್ ಇದ್ರೀಸ್ 3) ನಾಸೀರ್ ಖಾನ್ ಬಿನ್ ಇದ್ರೇಸ್ ಎಂಬ ಆಸಾಮಿಗಳು AP-22/C-4015 ನಲ್ಲಿ ಬಂದು ಸೋನಿ ಕಂಪನಿಯ ಟಿವಿಯೆಂದು ನಂಬಿಸಿ 8300/- ರೂಗೆ ಮಾತುಕತೆಯಾಗಿ ಹಣ ಕೊಡುವಾಗ ಕಂಡುಬಂದ ಸ್ಟಿಕ್ಕರ್ ಮತ್ತು ಆರೋಪಿಗಳು ಟಿವಿಗೆ ಸಂಬಂದಿಸಿದ ದಾಖಲಾತಿಗಳು ಮತ್ತು ಆರೋಪಿಗಳು ತಮ್ಮ ಐಡೆಂಟಿಟಿ ಕಾರ್ಡ್ ಇಲ್ಲದ ಕಾರಣ ಅನುಮಾನಗೊಂಡು ಪಿರ್ಯಾದಿ ಸ್ನೇಹಿತರ ಸಹಾಯದಿಂದ ಆರೋಪಿಗಳನ್ನು ಹಿಡಿಯಲಾಗಿ 1) **ಶಹರ್‌ಯಾರ್ ಖಾನ್ ಬಿನ್ ಅಫ್ರೋಜ್ ಖಾನ್, ಮುಸ್ಲೀಂ, ವ್ಯಾಪಾರ, 27 ವರ್ಷ, ಕಮಲಾನಗರ, ಮುಜಫ್ಫಾರ್ ನಗರ, ಉತ್ತರಪ್ರದೇಶ 2) ಶಾರುಖ್ ಖಾನ್ ಬಿನ್ ಇದ್ರೀಸ್, ಮುಸ್ಲಿಂ, 20 ವರ್ಷ, ಹುಸೈನ್ ಪುರಕಾಲ, ಮುಜಫ್ಫಾರ್ ನಗರ, ಉತ್ತರಪ್ರದೇಶ ರವರುಗಳು ಸಿಕ್ಕಿ, ಉಳಿದ ನಾಸೀರ್ ಖಾನ್ ಬಿನ್ ಇದ್ರೇಸ್, ಮುಸ್ಲಿಂ, 19 ವರ್ಷ, ಹುಸ್ಯೆನ್ ಪುರಕಾಲ, ಮುಜಫ್ಫಾರ್ ನಗರ, ಉತ್ತರಪ್ರದೇಶ ಎಂಬುವವರು ಓಡಿ ಹೋಗಿರುತ್ತಾರೆಂದ ಆರೋಪಿಗಳು ಮಾರಾಟ ಮಾಡಲು ತಂದಿದ್ದ ಟಿವಿ, ಅದಕ್ಕೆ ಉಪಯೋಗಿಸಿದ ಬೈಕ್, ಸೋನಿ ಕಂಪನಿಯ ಸ್ಟಿಕ್ಕರ್ ಸಮೇತ ಠಾಣೆಗೆ ಹಾಜರುಪಡಿಸಿ ನೀಡಿದ ದೂರಿನಂತೆ ಕುದೂರು ಪೊಲೀಸ್ ಠಾಣೆ ಮೊ,ನಂ 293/2020 ಕಲಂ 64 ಕಾಪಿ ರೈಟ್ ಆಕ್ಟ್ ಜೊತೆಗೆ 420 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ.**

ಆರೋಪಿಗಳು ಅಂತರರಾಜ್ಯದವರಾಗಿದ್ದು ವಿಚಾರಣೆಗೊಳಪಡಿಸಲಾಗಿ ಆರೋಪಿಗಳು ಹೈ-ಪೈ ಎಂದು ಇರುವ ಟಿವಿಗಳನ್ನು ದೆಹಲಿಯಿಂದ ಚನ್ನೈನಲ್ಲಿರುವ ಚೆನ್ನಿ ಖಾನ್ ಟ್ರೇಡರ್ಸ್‌ಗೆ ತರಿಸಿ ಅಲ್ಲಿಂದ ಕೋರಿಯರ್ ಮುಖಾಂತರ ಆರೋಪಿಗಳು ಪಡೆದು ಆ ನಕಲಿ ಟಿವಿಗಳಿಗೆ ಸೋನಿ ಕಂಪನಿಯ ಸ್ಟಿಕ್ಕರ್ ಅನ್ನು ಅಂಟಿಸಿ ಸೋನಿ ಕಂಪನಿಯದೆಂದು ಗ್ರಾಹಕರಿಗೆ ನಂಬಿಸಿ ಮೋಸದಿಂದ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತೆ. ಆರೋಪಿತರ ಕಡೆಯಿಂದ 43 ಇಂಚಿನ ಹೈ-ಪೈ ಕಂಪನಿಯ ಸ್ಮಾರ್ಟ್ ಎಂದು ಸ್ಟಿಕ್ಕರ್ ಇರುವ 12 ಟಿವಿಗಳು, ಸೋನಿ ಸ್ಟಿಕ್ಕರ್ ಅಂಟಿಸಿರುವ 06 ಟಿವಿಗಳು, ಟಿವಿಗಳಿಗೆ ಅಂಟಿಸುತ್ತಿದ್ದ ಸ್ಟಿಕ್ಕರ್‌ಗಳು ಮತ್ತು ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿರುತ್ತೆ. ಆರೋಪಿತರು ಎಲ್.ಇ.ಡಿ. ಟಿವಿಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲದ ಗ್ರಾಮೀಣ ಭಾಗದ ಅಂದರೆ ಕುದೂರು ಮತ್ತು ಇತರೆಡೆಗಳಲ್ಲಿ ರೈತರಿಗೆ ನಂಬಿಸಿ ಮಾರಾಟ ಮಾಡಿರುವುದು ತನಿಖೆಯಿಂದ ತಿಳಿದುಬಂದಿರುತ್ತದೆ.

ಸದರಿ ಆರೋಪಿಗಳು ಉತ್ತರ ಪ್ರದೇಶ ರಾಜ್ಯದಿಂದ ಬಂದು ಹೆಸರಾಂತ ಸೋನಿ ಕಂಪನಿಯ ಸ್ಟಿಕ್ಕರ್‌ಗಳನ್ನು ಹೈ-ಪೈ ಕಂಪನಿಯ ಟಿವಿಗಳಿಗೆ ಅಂಟಿಸಿ ಸೋನಿ ಟಿವಿಗಳೆಂದು ಗ್ರಾಹಕರಿಗೆ ನಂಬಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಮೂಲಕ ಹಣ ಸಂಪಾದಿಸಿ ಐಷಾರಾಮಿ ಜೀವನ ಮಾಡುವವರಾಗಿರುತ್ತಾರೆ.

ಮೇಲ್ಕಂಡ ಪ್ರಕರಣದಲ್ಲಿ ಆರೋಪಿಗಳು ಮತ್ತು ಮಾಲನ್ನು ಪತ್ತೆ ಮಾಡುವ ಬಗ್ಗೆ ರಾಮನಗರ ಜಿಲ್ಲೆಯ ಪೊಲೀಸ್ ಅಧೀಕ್ಷಕರಾದ ಶ್ರೀ ಗಿರೀಶ್. ಐಪಿಎಸ್‌ರವರ ಮಾರ್ಗದರ್ಶನದಲ್ಲಿ, ಮಾಗಡಿ ಉಪಾಧೀಕ್ಷಕರಾದ ಶ್ರೀ. ಓಂಪ್ರಕಾಶ್ ಕೆ.ಎಸ್.ಪಿ.ಎಸ್ ರವರ ನೇತೃತ್ವದಲ್ಲಿ ಮಾಗಡಿ ವೃತ್ತ ನಿರೀಕ್ಷಕರಾದ ಮಂಜುನಾಥ್ ಬಿ.ಎಸ್, ಕುದೂರು ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾಥ್.ಹೆಚ್.ಟಿ ರವರ ಕಾರ್ಯಾಚರಣೆಯಲ್ಲಿ, ಕುದೂರು ಠಾಣೆಯ ಸಿಬ್ಬಂದಿಗಳಾದ ಗುರುಮೂರ್ತಿ, ಲಕ್ಷ್ಮೀಕಾಂತ್, ಶಿವಕುಮಾರ್. ಲವಕುಮಾರ. ಹಾಗೂ ಪುರುಶೋತ್ತಮ, ಸುಭಾಷ್ ನಾಗೂರ್ ತಂಡವು ಆರೋಪಿಗಳಿಂದ ಮಾಲನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ.